ಮಾತಾಡಿದ್ದು ನಾನು ನೋಡಿಯೇ ಇರಲಿಲ್ಲ. ಇನ್ನು ಕಮಲಕ್ಕನ ಇಬ್ಬರು ಮಕ್ಕಳು ಹೊಲದ ಬಳಿ ಸುಳಿಯುತ್ತಲೇ ಇರಲಿಲ್ಲ. ಎಂದಾದರೂ ಒಮ್ಮೆ ಬಂದರೆ ಅದೇ ಹೆಚ್ಚು. ಇತ್ತೀಚೆಗೆ ಸಣ್ಣಯ್ಯ ದನಗಳನ್ನು ಖರೀಸುವುದು ಮತ್ತೆ ಮಾರುವ ವ್ಯಾಪಾರ ಶುರು ಮಾಡಿದ್ದ. ಅವನ ವ್ಯಾಪಾರಬುದ್ಧಿಯಿಂದಾಗಿ ಹೊಲಗಳನ್ನು ಆಳುಕಾಳುಗಳೇ ಮಾಡುವಂತಾಗಿತ್ತು.

ಹೊಲದ ಕೆಲಸ ಏನೇ ಇದ್ದರೂ ಜಯಮ್ಮನವರ ಆಜ್ಞೆಯ ಮೇರೆಗೆ ಸಿದ್ಧಣ್ಣನೂ ಜೊತೆಯಾಗುತ್ತಿದ್ದನು. ಸಣ್ಣಯ್ಯನಿಗೂ ಇದರಿಂದ ಬಲ ಬಂದಿದೆ ಅಂತ ಎಲ್ಲರೂ ಮಾತಾಡಿಕೊಳ್ಳುತ್ತಿದ್ದರು. ಈ ಬಾರಿ ಮಾತ್ರ ಸಿದ್ಧಣ್ಣ ಜೊತೆಯಾಗುವ ಪ್ರಯತ್ನ ಮಾಡಲಿಲ್ಲ. ಊರು ತನ್ನ ಬಾಯಲ್ಲಿ ಕಮಲಕ್ಕ ಸಿದ್ಧಣ್ಣನ ವಿಚಾರ ಮಾತನಾಡಲು ಹೆಚ್ಚೇ ಶುರುಮಾಡಿದ ಮೇಲೆ ಮುಜುಗರ ತರುವಂತಹ ಸಂಗತಿ ಆಗಿಬಿಟ್ಟಿತು. ಸಿದ್ಧಣ್ಣ ಹೊಲದ ಕೆಲಸಗಳನ್ನು ಬಿಟ್ಟು ಕ್ವಾರಿಯಲ್ಲೇ ತಲ್ಲೀನನಾದನು. ಅಲ್ಲಿ ಕೆಲಸ ಇಲ್ಲವಾದಾಗ ಊರಿನವರ ಹೂವುಗಳನ್ನು ಪೇಟೆಗೆ ತೆಗೆದುಕೊಂಡು ಹೋಗಿ ಮಾರಿ ಬರುತ್ತಿದ್ದನು.

ಹೊಲವೆಲ್ಲ ಉತ್ತು ಬಿತ್ತು ಹಸಿರು ಕಂಡವು. ಕಳೆ ಕಿತ್ತು ಬೆಳೆ ಸೊಗಸಾಗಿ ಕಚ್ಚಿತು. ಊರವರ ಬಾಯಲ್ಲಿ, 'ಈ ಬಾರಿ ಬೂಮ್ತಾಯಿ ಚೆನ್ನಾಗೆ ಕಣ್ಬಿಟ್ಟವಳೆ' ಎನ್ನುವ ಮಾತು ಹೊರಬರುತ್ತಿತ್ತು. ಗುಡುಗು ಮಿಂಚಿನ ಸಹಿತ ಮಳೆ ದಿನಬಿಟ್ಟು ದಿನ ಬರುತ್ತಿತ್ತು. ಹೀಗಿರುವಾಗ ಇದ್ದಕ್ಕಿದ್ದಂತೆ ಒಂದು ದಿನ ಅಮವಾಸ್ಯೆಯಲ್ಲಿ ಹಿತ್ತಲ ಬಾಗಿಲಿನಿಂದ ಜಯವ್ವ ನಮ್ಮನೆಗೆ ಬಂದರು. ಕಗ್ಗತ್ತಲು. ಮೊಂಡ ಬೊಗಳಿತು. ಅವ್ವ ಅದಕ್ಕೆ ಸುಮ್ಮನಿರುವಂತೆ ಹೇಳಿ ಬಾಗಿಲು ತೆರೆದಳು. ಬಂದವರು ನಮ್ಮನೆಯ ಮೋಟು ಗೋಡೆ ಮೇಲೆ ಕುಂತರು. 'ಅಲ್ಲಾ ಗಿರ್ಜ, ನೀನಾದ್ರು ಬುದ್ಧಿ ಹೇಳ್ಬಾರದೆ, ನಮ್ಮನೆ ಮರ್ವಾದೆ ಎತ್ತಗೋಗ್ಬೇಕು... ಇವ್ಳಿಗೆ ಇಂತ ಬುದ್ಧಿ ಯಾಕ್ಬಂತು' ಎಂದು ಹೇಳಿ ಕಣ್ಣೀರುಗರೆದರು. ಅವ್ವ ಉಸಿರು ಬಿಗಿ ಹಿಡಿದು ನಿಂತಳು. ಕೊನೆಗೆ, 'ಅಳಬ್ಯಾಡ್ರವ್ವ.. ನೀವಂದುಕೊಂಡಂಗೆ ಏನೂ ಆಗಿಲ್ರವ್ವ, ನಂಗೊತ್ತಿರೋದು ಇಷ್ಟೆಯಾ... ಆದ್ರೂ ಮಾತಾಡತೀನಿ ಕಣ್ರವ್ವ' ಎಂದ ಅವ್ವನ ಮಾತಿಗೆ ಜಯವ್ವ ಹೊರಟರು. ಕತ್ತಲಾದ್ದರಿಂದ ಹಿಂಬಾಗಿಲವರೆಗೂ ಅವ್ವನೇ ಬಿಟ್ಟು ಬಂದಳು.

ರಾತ್ರಿಯೆಲ್ಲ ಚಿಂತಿಸಿದಳು. ನಿಟ್ಟುಸುರು ಬಿಟ್ಟಳು. ಇದಾದ ಒಂದು ವಾರ ಅವ್ವ ಸಪ್ಪಗೇ ಇದ್ದಳು. ಅಣ್ಣನೂ ಬಂದು ಹೋದ. ಮನೆಯ ಮುಳುಗೋ ದಿಕ್ಕಿಗೆ ಹಲ್ಲಿ ಲೊಚಗುಟ್ಟಿದರೆ ಸಾಕು ತಾನೂ



ಅದರಂತೆ ಲೊಚಗುಟ್ಟುತ್ತ ಏನೂ ಆಗದಿರಲಪ್ಪ ಎಂದುಕೊಳ್ಳುತ್ತಿದ್ದಳು. ಒಂದು ಶನಿವಾರ ಮತ್ತೆ ಸಂತೆಗೆ ಹೊರಟಳು. ನಾನೂ ಹೊರಟೆ. ಸಂತೆಯಲ್ಲಿ ಈ ದಿನ ಮತ್ತೆ ಅವರಿಬ್ಬರು ಸಿಕ್ಕರು. ಈ ದಿನ ಕಮಲಕ್ಕ ತನ್ನ ಚಿಕ್ಕ ಮಗಳನ್ನೂ ಜೊತೆಗೆ ಕರೆತಂದಿದ್ದಳು. ಸಾಮಾನುಗಳನ್ನು ಕೊಳ್ಳಲು ಅಲ್ಯಾರಿಗೂ ಮನಸ್ಸಿರಲಿಲ್ಲ. ಎಂದಿನಂತೆ ಮಲ್ಲಿಗೆ ಮಾರುವ